ಅಭಿಪ್ರಾಯಕ್ಕೆ ಬಂದುದರಿಂದ, ೭೭ ಆಡಿ ಪೈಪ್‌ಗೆ ಆರ್ಡರ್ ಆಗಿದೆ, ಕೆಲಸ ಆಗುತ್ತಿದೆ, ಹೆಚ್ಚಿನ ಫಾಲ್ ಏನೂ ಆಶ್ಚು ಆಗುವುದಿಲ್ಲ. ಇದು ಟೆಕ್ನಿಕಲ್ ನಮಗೂ ನಿಮಗೂ ಅರ್ಥವಾಗುವುದಿಲ್ಲ.

ಶ್ರೀ ಪಿ. ರಾಂದೇವ್.--ಅಧ್ಯಕ್ಷರೇ, ಇದು ಸಾರ್ವಜನಿಕರ ಆಸ್ತಿ. ಸಾರ್ವಜನಿಕರ ಆಸ್ತಿಯಲ್ಲಿ ಪೈಪ್ ತೆಗೆದುಕೊಂಡರೆ ಯಾರಿಗೂ ಏನೂ ತೊಂದರೆಯಾಗುವುದು ಇರಲಿಲ್ಲ. ಇದು ಏನಾದರೂ ರಾಜಭವನ ಹೊಡೆದು ಹೋಗುವಂತ ಪರಿಸ್ಥಿತಿಗೆ ಬಂದಿದ್ದರೆ ಆದನ್ನು ಒಪ್ಪಿಕೊಳ್ಳುತ್ತೇನೆ. ಇದು ಏನಾಗಿದೆ ಎಂದರೆ ಈ ಹಟಮಾರಿತನದಿಂದ ನಾವು ೩೫ ಲಕ್ಷ ಜನ ನೀರು ಇಲ್ಲದೆ ತೊಂದರೆಗೆ ಒಳಗಾಗಿದ್ದೇವೆ. ತಾವು ನಮ್ಮನ್ನು ರಾಜ್ಯಪಾಲರ ಬಳಿ ಕರೆದುಕೊಂಡುಹೋಗಿ, ಬೆಂಗಳೂರು ನಗರದ ತಾಸಕರೆಲ್ಲರೂ ಬರುತ್ತೇವೆ ಅವರಿಗೆ ನಮಸ್ಕಾರ ಮಾಡುತ್ತೇವೆ. ಇವತ್ತು ಪೈಪು ಮಾಡಶಕ್ಕ ಫ್ಯಾಕ್ಟರಿ ಮುಚ್ಚಿದ್ದಾರೆ. ದಯವಿಟ್ಟು ಮಾನ್ಯ ಚಂದ್ರಶೇಖರ್ ಅವರು ನಮ್ಮನ್ನೆಲ್ಲಾ ರಾಜ್ಯಪಾಲರ ಬಳಿ ಕರೆದುಕೊಂಡು ಹೋದರೆ ಕೈ ಮುಗಿದು ಕೇಳಿಕೊಳ್ಳುತ್ತೇವೆ. ಇಲ್ಲದೇ ಹೋದರೆ ರಾಜ್ಯಪಾಲರಿಗೆ ಮುತ್ತಿಗೆ ಹಾಕತಕ್ಕ ಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಎಂದು ಮಾನ್ಯ ಮಂತ್ರಿಗಳಿಗೆ ತಿಳಿಸಲಿಕ್ಕೆ ಇಷ್ಟ ಪಡುತ್ತೇನೆ.

ANNOUNCEMENT

MR. SPEAKER.—I have received a recommendation from the Governor for introduction of the Karnataka Mator Vehicles Taxation (Amendment)Bill, 1983.

ಶಾಸನ ರಚನೆ ಕಾರ್ಯಕಲಾಪಗಳು

ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ) ವಿಧೇಯಕ, ೧೯೮೩ ಮಂಡನೆ ಕೋರುವ ಪ್ರಸ್ತಾವ.

ಶ್ರೀ ಎ. ಲಕ್ಷ್ಮೀಸಾಗರ್ --(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) ಅಧ್ಯಕ್ಷರೇ, ಮಾನ್ಯ ಸಾರಿಗೆ ಸಚಿವರ ಪರವಾಗಿ, ಈ ಕೆಳಕಂಡ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿಯನ್ನು ಕೋರುತ್ತೇನೆ.

ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ)ವಿಧೇಯಕ ೧೯೮೩.

ಅಧ್ಯಕ್ಷರು.--ಪ್ರಸ್ತಾವವು ಹೀಗಿದೆ.—

ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ(ತಿದ್ದುಪಡಿ)ವಿಧೇಯಕ ೧೯೮೩, ಮಂಡಿಸಲು ಅನುಮತಿಯನ್ನು ನೀಡುವುದು.

ಪ್ರಸ್ತಾವವು ಅಂಗೀಕೃತವಾಯಿತು.

ಶ್ರೀ ಎ ಲಕ್ಷ್ಮೀಸಾಗರ್.--ಕರ್ನಾಟಕ ರಾಜ್ಯದ ಮೋಟಾರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ ೧೯೮೩, ಮಂಡಿಸುತ್ತೇನೆ.

ಅಧ್ಯಕ್ಷರು.--ವಿಧೇಯಕವನ್ನು ಮಂಡಿಸಲಾಗಿದೆ.*

ಕರ್ನಾಟಕ ರಾಜ್ಯದ ಶಿಕ್ಷಣ ಸಂಸ್ಥೆಗಳ(ವ್ಯಕ್ತಿಪರ ಶುಲ್ಕ ನಿಷೇದಿಸುವ)ವಿಧೇಯಕ ೧೯೮೩.

ಅಧ್ಯಕ್ಷರು.--ಅಪೂರ್ಣ ಚರ್ಚೆ, ಶ್ರೀಮಾನ್ ವೀರಪ್ಪ ಮೊಯಿಲಿಯವರು ಮುಂದುವರಿಸಿ ಬರ್ಸಂದು.

ಶ್ರೀ ಎಂ, ವೀರಪ್ಪ ಮೊಯಿಲಿ.--ಅಧ್ಯಕ್ಷರೇ, ಮಾನ್ಯ ಆರೋಗ್ಯ ಸಚಿವರು, ವಿದ್ಯಾ ಸಚಿವರು ಇದ್ದರೆ ಚೆನ್ನಾಗಿರುತ್ತಿತ್ತು.

ಅಧ್ಯಕ್ಷರು.--ಉತ್ತರವನ್ನು ಆರೋಗ್ಯ ಸಚಿವರೇ ಕೊಡುತ್ತಾರೆ.

---

* ಅನುಬಂಧ